STARTING OF POST-GRADUATE COURSES IN A COLLEGE AT DAVANGERE.

900. Smt. NAGAMMA C. KESHAVA MURTHY (Davanagere).—

Will the Minister for Education be pleased to state:—

(*a*) the total number and names of different types of colleges existing at Davangere City;

(*b*) whether the Government has received any representation to start post-graduate courses in any of these colleges;

(*c*) if so, whether the Government is actively considering the matter in this regard?

Sri A. R. BADARINARAYANA (Minister for Education).—

(*a*) Eight. (1) D.R.M. College, (2) B.D.T. College of Engineering, (3) J.J.M. Medical College, (4) R.L. Law College, (5) A. V. Kamalamma College for Women, (6) M.S.B. Evening College, (7) Makanur Malleshappa College of Education, (8) Channappa Junior College.

(*b*) None in respect of institutions under the jurisdiction of Education Department.

(*c*) Does not arise in view of reply to clause 'b' of the Question.

ಶ್ರೀಮತಿ ನಾಗಮ್ಮ ಸಿ. ಕೇಶವ ಮೂರ್ತಿ.—ದಾವಣಗೆರೆಯಲ್ಲಿ ಎಂಟು ಕಾಲೇಜುಗಳಿವೆಯೆಂದು ಇಲ್ಲಿ ಉತ್ತರದಲ್ಲಿ ತಿಳಿಸಿದೆ. ಇಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳು ಸ್ನಾತಕೋತ್ತರ ವ್ಯಾಸಂಗ ಮಾಡಬೇಕಾದರೆ ಅವರು ಬೆಂಗಳೂರಿಗೆ, ಇಲ್ಲವೇ ಮೈಸೂರಿಗೆ ಇಲ್ಲವೇ ಧಾರವಾಡಕ್ಕೆ ಹೋಗಬೇಕಾಗಿದೆ. ಆದರೆ ಆ ಒಂದು ತೊಂದರೆಯನ್ನು ತಪ್ಪಿಸಲು ದಾವಣಗೆರೆಯಲ್ಲೇ ಒಂದು ಸ್ನಾತಕೋತ್ತರ ಕೋರ್ಸನ್ನು ಏಕೆ ತೆರೆಯಬಾರದು?

ಶ್ರೀ ಎ. ಆರ್. ಬದರೀನಾರಾಯಣ.—ಈಗ ದಾವಣಗೆರೆಯಲ್ಲಿ ಇಂಜನಿಯರಿಂಗ್, ಮೆಡಿಕಲ್ ಮತ್ತು ಲಾ ಕಾಲೇಜುಗಳಿವೆ. ಆದರೆ ಜೆ.ಜೆ. ಮೆಡಿಕಲ್ ಕಾಲೇಜಿನವರು ಪೋಸ್ಟ್ ಗ್ರಾಜುಯೇಟ್ ಕೋರ್ಸ್ ಇನ್ ಮೆಡಿಸನ ನ್ನು ತೆರೆಯುವುದಕ್ಕೆ ಕೇಳಿಕೊಂಡಿದ್ದರು. ಅದರ ಬಗ್ಗೆ ಯೂನಿವರ್ಸಿಟಿ ಸಿಂಡಿಕೇಟಿನವರು ಒಂದು ಸಬ್ ಕಮಿಟಿಯವರು ಮೇ ಮೂರನೇ ವಾರದಲ್ಲಿ ಅದರ ಇನ್‌ಸ್ಪೆಕ್ಷನ್ ಇಟ್ಟುಕೊಂಡಿದ್ದಾರೆ. ಇನ್ನು ಬಿ.ಡಿ.ಟಿ. ಇಂಜಿನಿಯರಿಂಗ್ ಕಾಲೇಜಿನವರು ಪೋಸ್ಟ್‌ಗ್ರಾಜುಯೇಟ್ ಕೋರ್ಸ್‌ನ್ನು ತೆರೆಯುವುದಕ್ಕೆ ಕೇಳಿ ಕೊಂಡಿದ್ದರು. ಆದರೆ ಕೇಂದ್ರ ಸರ್ಕಾರದವರು ಅದಕ್ಕೆ ಅನುಮತಿಯನ್ನು ಕೊಡಲಿಲ್ಲ. ಅದನ್ನು ಸಧ್ಯಕ್ಕೆ ಡೆಫರ್‌ಮಾಡಿದಾರೆ. ಕಾರಣ ಪಾಸ್‌ಮಾಡಿದ ಜನಕ್ಕೆ ಉದ್ಯೋಗಗಳು ಸಿಕ್ಕುತ್ತಿಲ್ಲ ಎಂದು.

ಶ್ರೀಮತಿ ನಾಗಮ್ಮ ಸಿ. ಕೇಶವ ಮೂರ್ತಿ.—ಎ.ವಿ. ಕಮಲಮ್ಮ ಕಾಲೇಜಿನಲ್ಲಿ ಎಂ.ಎ., ಎಂ.ಎಸ್.ಸಿ. ಕೋರ್ಸನ್ನು ತೆರೆಯುವುದಕ್ಕೇನುತೊಂದರೆ ಇದೆ?

ಶ್ರೀ ಎ. ಆರ್. ಬದರಿನಾರಾಯಣ.—ಅವರು ಅದಕ್ಕೆ ಅನುಸರಿಸಬೇಕಾದ ಕೆಲವು ಕ್ರಮಗಳಿವೆ. ಆದರ ಪ್ರಕಾರ ಅವರು ಅರ್ಜಿ ಕೊಟ್ಟಿದ್ದಾರೋ ಇಲ್ಲವೋ ಗೊತ್ತಿಲ್ಲ.

ಅಧ್ಯಕ್ಷರು.—ಈಗ ಪ್ರಶ್ನೋತ್ತರ ವೇಳೆ ಮುಗಿಯಿತು.